**ಓ.ಎಸ್. ನಂಃ 386/2023**

**ಪಿ.ಡಬ್ಲ್ಯೂಃ 1**

**ದಿನಾಂಕ 16.01.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಕೆ.ಬಿ.ಜಿ ವಕೀಲರಿಂದಃ**

1. ನಾನು ಅನಕ್ಷರಸ್ಥನಾಗಿರುತ್ತೇನೆ. ವಾದಿ ಆರೋಗ್ಯವಂತರಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಹೃದಯ ಸಂಬಂಧಿ ಖಾಯಿಲೆ ಇದೆ. ವಾದಿಗೆ ಅನಾರೋಗ್ಯವಿದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಗೆ ಈ ದಾವೆಯನ್ನು ಹೂಡಲು ಇಷ್ಟವಿಲ್ಲದಿದ್ದರೂ ಸಹ ನಾನೇ ಬಲವಂತದಿಂದ ಈ ದಾವೆಯನ್ನು ಹೂಡಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ತಮ್ಮ ತಂದೆಯ ಆಸ್ತಿ ತಮಗೆ ಬರಬೇಕು ಎಂದು ಹೇಳಿ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ. ವಾದಿಯ ತಂದೆಯ ತಂದೆ ಅಂದರೆ ವಾದಿಯ ತಾತನ ಹೆಸರು ಕೆಂಪೇಗೌಡ @ ಮಾಯಿಗೌಡ ಅಂತ ಇರುತ್ತದೆ. ವಾದಿಯ ತಾತನಾದ ಕೆಂಪೇಗೌಡ @ ಮಾಯಿಗೌಡ ರವರಿಗೆ ವಾದಿಯ ತಂದೆಯಾದ ಕಾರೀಗೌಡ ಮತ್ತು ಪ್ರತಿವಾದಿಯರ ತಂದೆಯಾದ ಅಣ್ಣಯ್ಯ ಅಂತ 2 ಜನ ಮಕ್ಕಳಿದ್ದರು ಎಂದರೆ ಸರಿ. ನನ್ನ ತಾತನಾದ ಕಾರೀಗೌಡರಿಗೆ ವಾದಿ ಒಬ್ಬಳೇ ಮಗಳು ಎಂದರೆ ಸರಿ. ವಾದಿಯನ್ನು ಸಾತಿಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

3. ಈ ದಾವೆಯ ಪ್ರತಿವಾದಿಯರು ವಾದಿಯ ತಾತನಾದ ಕೆಂಪೇಗೌಡ @ ಮಾಯಿಗೌಡರವರ 2 ನೇ ಮಗನಾದ ಅಣ್ಣಯ್ಯರವರ ಮಕ್ಕಳು ಎಂದರೆ ಸರಿ. ಅಣ್ಣಯ್ಯ ಬಿನ್ ಕೆಂಪೇಗೌಡ @ ಮಾಯಿಗೌಡ ರವರಿಗೆ ಸೇರಿದ ಆಸ್ತಿಗಳನ್ನು ಅವರ ಮಕ್ಕಳಾದ ಪ್ರತಿವಾದಿಯರು ಪಾಲುವಿಭಜನೆ ಮಾಡಿಕೊಂಡು ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ಯಾವ ಜಮೀನು ಯಾವ ಪ್ರತಿವಾದಿಗೆ ಹಿಸ್ಸೆ ಹೋಗಿರುತ್ತದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು 3 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ.

4. ವಾದಿಯ ತಂದೆಯಾದ ಕಾರೀಗೌಡರನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಈಗ ದಿಃ 16.05.2002 ರ ನೊಂದಾಯಿತ ವೀಲುನಾಮೆಯನ್ನು ತೋರಿಸಿದ್ದು, ಸದರಿ ವೀಲುನಾಮೆಯ 1 ನೇ ಪುಟದ ಹಿಂಬದಿಯಲ್ಲಿ ಕರೀಗೌಡ, ಬೀರೇಶ, ಎ.ಎಸ್.ಮಲ್ಲೇಶ ಎನ್ನುವ ವ್ಯಕ್ತಿಗಳ ಮೂರು ಪೊಟೋಗಳಿದ್ದು, ಸದರಿ ಪೋಟೋಗಳ ಪೈಕಿ ಮೊದಲನೇಯ ಪೊಟೋದ ಎದುರು ಕಾರೀಗೌಡ ಎನ್ನುವ ಹೆಸರು ಇರುವ ಮೊದಲನೇಯ ಪೊಟೋವನ್ನು ಸಾಕ್ಷಿ ನೋಡಿ, ಸದರಿ ಪೊಟೋವು ವಾದಿಯ ತಂದೆಯಾದ ಕಾರೀಗೌಡರ ಪೊಟೋ ಎಂದು ನೋಡಿ ಗುರುತಿಸಿರುತ್ತಾರೆ.

5. ವಾದಿಯ ತಂದೆಯಾದ ಕಾರೀಗೌಡರು ಮರಣ ಹೊಂದುವಾಗ ನನಗೆ 26 ವರ್ಷ ವಯಸ್ಸಾಗಿತ್ತು. ತಮ್ಮ ಮರಣದವರೆಗೂ ವಾದಿಯ ತಂದೆಯಾದ ಕಾರೀಗೌಡರು ಆರೋಗ್ಯವಂತರಾಗಿದ್ದರು ಎಂದರೆ ಸರಿ. ತಮ್ಮ ಮರಣದವರೆಗೂ ವಾದಿಯ ತಂದೆಯಾದ ಕಾರೀಗೌಡರು ಕಾಮೇನಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಸಹ ವಾದಿಯ ತಂದೆಯಾದ ಕಾರೀಗೌಡರನ್ನು ನೋಡಿಕೊಂಡಿರುತ್ತೇವೆ ಎಂದು ಸ್ವತಃ ನುಡಿದಿರುತ್ತಾರೆ.

6. ವಾದಿಯ ತಂದೆಯ ಮರಣದವರೆಗೂ ವಾದಿಯ ತಂದೆ 3 ನೇ ಪ್ರತಿವಾದಿಯ ಮನೆಯಲ್ಲಿಯೇ ಇದ್ದರೂ ಎಂದರೆ ಸರಿಯಲ್ಲ. ನನ್ನ ತಂದೆ ಅಂದರೆ ವಾದಿಯ ಗಂಡನಾದ ಶಿವಣ್ಣೇಗೌಡರು 2019 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯಾದ ವಾದಿ ಮತ್ತು ನನ್ನ ತಂದೆಯ ಮಧ್ಯೆ ಯಾವುದೇ ವೈವಾಹಿಕ ಕಲಹವಿರಲಿಲ್ಲ ಮತ್ತು ಅವರು ಬೇರೆ ಬೇರೆಯಾಗಿರಲಿಲ್ಲ. ವಾದಿ ಮತ್ತು ವಾದಿಯ ಗಂಡ ಅನ್ಯೋನ್ಯವಾಗಿ ಸಾತಿಗ್ರಾಮದಲ್ಲಿ ಜೊತೆಯಾಗಿ ವಾಸಿಸುತ್ತಿದ್ದರು ಎಂದರೆ ಸಾಕ್ಷಿಯು ವಾದಿ ಸಾತಿಗ್ರಾಮ ಮತ್ತು ಕಾಮೇನಹಳ್ಳಿ 2 ಕಡೆ ಹೋಗಿ ಬರುವುದು ಮಾಡುತ್ತಿದ್ದರು ಎಂದು ಸ್ವತಃ ನುಡಿದಿರುತ್ತಾರೆ.

7. ನಾನು ಸಹ ವಾದಿಯ ತಂದೆಯಾದ ಕಾರೀಗೌಡರನ್ನು ನೋಡಲು ಆಗಾಗ ಹೋಗಿ ಬರುತ್ತಿದ್ದೆ. ಸಾತಿಗ್ರಾಮದಿಂದ ಕಾಮೇನಹಳ್ಳಿ 2 ಕಿ.ಮೀ ದೂರದ ಅಂತರದಲ್ಲಿದೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ಸಾತಿಗ್ರಾಮದಿಂದ ಕಾಮೇನಹಳ್ಳಿ 6 ಕಿ.ಮೀ ಅಂತರದಲ್ಲಿದೆ ಎಂದರೆ ಸರಿಯಲ್ಲ. ಸಾತಿಗ್ರಾಮದಿಂದ ಕಾಮೇನಹಳ್ಳಿ ದೂರದಲ್ಲಿರುವುದರಿಂದ ವಾದಿಗೆ ಆಗಾಗ ತಮ್ಮ ತಂದೆಯನ್ನು ನೋಡಲು

ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯನ್ನು ಸಾತಿಗ್ರಾಮಕ್ಕೆ ವಿವಾಹ ಮಾಡಿಕೊಟ್ಟ ನಂತರ ವಾದಿ ಕಾಮೇನಹಳ್ಳಿಗೆ ಹೋಗುತ್ತಿರಲಿಲ್ಲ ಹಾಗೂ ವಾದಿಯ ತಂದೆಯಾದ ಕಾರೀಗೌಡರ ಯೋಗಕ್ಷೇಮವನ್ನು ಕೇವಲ 3 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

8. ದಾವಾ ಆಸ್ತಿಯ ಸರ್ವೆ ನಂಬರ್ 264/1 ಅಂತ ಇದ್ದು, ಅದರ ವಿಸ್ತೀರ್ಣ 15 ಗುಂಟೆ ಇರುತ್ತದೆ. ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿ ಯಾವ ಬೆಳೆಯನ್ನು ಬೆಳೆಯುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ನಾವು ಭತ್ತದ ಬೆಳೆಯನ್ನು ಬೆಳೆಯುತ್ತೇವೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ಒಟ್ಟು 5 ಗದ್ದೆಗಳಿವೆ. ನಾನು ದಾವಾ ಆಸ್ತಿಯನ್ನು ಎಂದಿಗೂ ಸಹ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ದಾವಾ ಆಸ್ತಿಯಲ್ಲಿ ಕೇವಲ 4 ಗದ್ದೆಗಳು ಮಾತ್ರ ಇದ್ದರೂ ಸಹ 5 ಗದ್ದೆಗಳಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ 1 ನೇ ಪ್ರತಿವಾದಿಯ ಜಮೀನು ಇಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಇರುವ ಜಮೀನು ಯಾವ ಪ್ರತಿವಾದಿಯ ಹಿಸ್ಸೆಗೆ ಹೋಗಿರುದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಯಾರ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಕಾಲುವೆಯಿಂದ ನೀರನ್ನು ಎಲ್ಲ ಜಮೀನಿನ ಮಾಲೀಕರಿಗೂ ಸಹ ಒಟ್ಟಿಗೆ ಒಂದೇ ಕಾಲಕ್ಕೆ ಬಿಡುತ್ತಾರೆ ಎಂದರೆ ಸರಿ. ಆ ಸಮಯಕ್ಕೆ ದಾವಾ ಆಸ್ತಿಯ ಅಕ್ಕಪಕ್ಕದ ಜಮೀನಿನ ಮಾಲೀಕರು ಸೇರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ನೋಡದಿರುವ ಕಾರಣ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

10. ದಾವಾ ಆಸ್ತಿಯ ನಂತರ 5 ಗದ್ದೆ ದಾಟಿದ ನಂತರ ಕಾವೇರಿ ನದಿ ನೀರು ಬರುತ್ತದೆ. ತಮ್ಮ ಎಲ್ಲ ಕಷ್ಟಸುಖಗಳನ್ನು ವಾದಿಯ ತಂದೆ ವಾದಿಗೆ ಹೇಳುತ್ತಿದ್ದರು. ವಾದಿಯ ತಂದೆಯಾದ ಕಾರೀಗೌಡರು ವೀಲುನಾಮೆ ಮಾಡಿರುವ ವಿಷಯ ನಿಮಗೆ ಹೇಳಿರುತ್ತಾರೆಯೋ ಅಥವಾ ವಾದಿಗೆ ಹೇಳಿರುತ್ತಾರೆಯೋ ಎಂದು ಸೂಚಿಸಿದ ಪ್ರಶ್ನಗೆ ಸಾಕ್ಷಿಯು ವೀಲುನಾಮೆ ಮಾಡಿರುವುದು ಸುಳ್ಳು ಎಂದು ನುಡಿದಿರುತ್ತಾರೆ.

11. ದಾವಾ ಆಸ್ತಿಯು ಕಾರೀಗೌಡರಿಗೆ ತಮ್ಮ ತಂದೆಯಿಂದ ಬಂದಿರುತ್ತದೆ. ದಾವಾ ಆಸ್ತಿಯು ಕಾರೀಗೌಡರಿಗೆ ಹೇಗೆ ಮತ್ತು ಯಾವ ಮೂಲದಿಂದ ಬಂದಿರುತ್ತದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ.4 ರ ಪ್ರಕಾರ ದಾವಾ ಆಸ್ತಿಯು ವಾದಿಯ ತಂದೆಯಾದ ಕಾರೀಗೌಡರಿಗೆ ಮಾತ್ರ ಮಂಜೂರಾದ ಆಸ್ತಿಯಾಗಿರುತ್ತದೆ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಯು ಕಾರೀಗೌಡರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

12. ಕೇವಲ ಕಾರೀಗೌಡರಿಗೆ ಮಾತ್ರ ದಾವಾ ಆಸ್ತಿಯು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 240/1 ರಲ್ಲಿ 15 ಗುಂಟೆ ಜಮೀನು ಮಾತ್ರ ಕಾರೀಗೌಡರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ. ಸರ್ವೆ ನಂಬರ್ 246/2 ರಲ್ಲಿ 5 ಗುಂಟೆ ಜಮೀನು ಸಹ ಕಾರೀಗೌಡರಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ 5 ಗುಂಟೆ ಜಮೀನು ಕೆ.ಆರ್.ಎಸ್ ಆಣೆಕಟ್ಟಿನಲ್ಲಿ ಮುಳುಗಡೆಯಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

13. ಯಾವಾಗ ನಿಮಗೆ ಕಾರೀಗೌಡರು 3 ನೇ ಪ್ರತಿವಾದಿಯ ಹೆಸರಿಗೆ ವೀಲುನಾಮೆ ಮಾಡಿರುವ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಪೌತಿ ಆಧಾರದ ಮೇಲೆ ವಾದಿಯ ಹೆಸರಿಗೆ ಖಾತೆ ವರ್ಗಾವಣೆ ಆದನಂತರದಲ್ಲಿ ಕಾರೀಗೌಡರು ವೀಲುನಾಮೆ ಮಾಡಿರುವ ಬಗ್ಗೆ ನಮಗೆ ಗೊತ್ತಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**